# “ರಜತ” ಸಾಲುಗಳು .......



ಒಂದು ಸಂಸ್ಥೆಯನ್ನು ಆರಂಭಿಸುವುದು ಕಷ್ಟದ ಕೆಲಸವಲ್ಲ, ಹತ್ತಾರು ಮಂದಿ ಜೊತೆಗೂಡಿದಾಗ ಸ್ಫೂರ್ತಿಯಲ್ಲಿ, ಆವೇಶದಲ್ಲಿ, ಆ ಸಂಸ್ಥೆಯು ಹುಟ್ಟಿಕೊಳ್ಳುತ್ತದೆ. ಆದರೆ ಅದನ್ನು ಯಶಸ್ವಿಯಾಗಿ ನಡೆಸಿಕೊಂಡು ಸಾಗುವುದು ಸುಲಭವಲ್ಲ, ಮುಖ್ಯವಾಗೆ ಇಲ್ಲಿ ಯೋಜನೆಗಳಿಗೆ ಆರ್ಥಿಕ ಅಡಚನೆ, ಉತ್ಸಾಹ, ಸಮಯದ ಕೊರತೆಯ ಜೊತೆಗೆ ವಾದ-ಪ್ರತಿವಾದ, ಭಿನ್ನಾಭಿಪ್ರಾಯ, ರಾಜಕೀಯ ಒತ್ತಡಗಳು ಇತ್ಯಾದಿ ಅಡ್ಡಿಯಾಗುತ್ತದೆ. ಹೀಗಾಗಿ ಹುಟ್ಟಿಕೊಂಡ ಸಂಘ-ಸಂಸ್ಥೆಗಳು ಕೆಲವೇ ಸಮಯದಲ್ಲಿ ಮುಚ್ಚಿಹೋಗುತ್ತವೆ.

ಇದಿಗ ಉಡುಪಿಯ “ಮುಸ್ಲಿಂ ವೆಲ್‌ಫೇರ್ ಎಸೋಶಿಯೇಶನ್” ಎಂಬ ಸಂಸ್ಥೆಯು ಮೇಲಿನ ಪೀಠಿಕೆಯನ್ನು ಸುಳ್ಳುಮಾಡಿವೆ. ಅದು ಕಳೆದ 25 ವರ್ಷಗಳಿಂದ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಾ, ರಜತ ಮಹೋತ್ಸವವನ್ನು ಆಚರಿಸಿದೆ. ಈ ಸಾಧನೆಯ ಗೆಲುವಿನಲ್ಲಿ ನೂರಾರು ಮಂದಿಯ ದುಡಿಮೆಯಿದೆ, ಶ್ರಮವಿದೆ, ಛಲವಿದೆ. ಉಡುಪಿ ಜಿಲ್ಲೆಯ ಆಸುಪಾಸಿಗೆ ಹಬ್ಬಿ ನಿಂತಿರುವ ಸಂಸ್ಥೆಯು ಇತರರಿಗೆ ಮಾದರೆಯಾಗಿ ಬೆಳೆದಿದೆ. ಇದು ಈ ‘ಎಸೋಶಿಯೇಶನ್’ನ ಭವಿಷ್ಯದಲ್ಲಿ ಇನ್ನಷ್ಟು ಪ್ರಗತಿಗಳು ಕಾಣುವ ಸುಂದರ ಸ್ವಪ್ನಗಳಿವೆ. ಅದಕ್ಕೆ ನಿಜ ಮಾಡಲು ಎಲ್ಲರ ಬೆಂಬಲ ಬೇಕಾಗಿದೆ.

ಒಂದು ಸಂಸ್ಥೆಯು ಬೆಳೆದು, ಅದು ಶ್ರಮಕ್ಕೆ ತಕ್ಕ ಪ್ರತಿಫಲ ನೀಡಿದಾಗ ಅದರ ಆನಂದವೇ ಅವರ್ಣನೀಯ. ಉದಾಹರಣೆಗೆ ಓರ್ವ ಬಡವಿದ್ಯಾರ್ಥಿಯು ಈ ಸಂಸ್ಥೆಯ ವಿದ್ಯಾರ್ಥಿ ವೇತನದಲ್ಲಿ ಅಥವಾ ಈ ಮದ್ರಸದ ಆಶ್ರಯದಲ್ಲಿ ವಿದ್ಯೆಕಲಿತು, ಮುಂದೆ ಯಾವುದೇ ನೆಲೆಯಲ್ಲಿ ನಿಂತು, ದೊಡ್ಡ ಸಾಧನೆ ಮಾಡಿದಾಗ ಅದರ ಬೆಲೆಯೇ ಅಪೂರ್ವ. ತನ್ನ ಭವಿಷ್ಯಕ್ಕೆ ಈ ಎಸೋಶಿಯೇಶನ್ ಮುನ್ನುಡಿ ಅಂದಾಗ ಆ ಸಂಸ್ಥೆಯ ಕ್ರಮ ಸಾರ್ಥಕ ಅನಿಸುತ್ತದೆ.

ನಮ್ಮ ಸಮಾಜಕ್ಕೆ ಶಿಕ್ಷಣ ಅನ್ನುವುದು ಅತೀ ಅಗತ್ಯವಾದ ಬೆಳಕು. ಇವತ್ತು ನಮ್ಮ ಸಮುದಾಯದ ಬಡತನಕ್ಕೆ ಅಪಮಾನಕ್ಕೆ, ಅಪನಂಬಿಕೆಗೆ ಹಾಗೂ ನಿರುದ್ಯೋಗದ ಭವಣೆಗೆ ಶಿಕ್ಷಣದ ಕೊರತೆಯೇ ಬಲವಾದ ಏಟು. ಈ ಸಮಸ್ಯೆಯನ್ನು ಎಲ್ಲಾ ಸಂಘ-ಸಂಸ್ಥೆಗಳು ಜೊತೆಯಾಗಿ ಬಗೆಹರಿಸಬೇಕಾಗಿದ್ದು ಎಲ್ಲರ ಕರ್ತವ್ಯವೂ ಹೌದು.

ಮುಸ್ಲಿಮ್ ವೆಲ್‌ಫೇರ್ ಇದಕ್ಕಾಗಿ ತುಂಬಾ ಶ್ರಮಿಸುತ್ತಿದೆ. ಅದು ಪ್ರತಿವರ್ಷವೂ ಅರ್ಹ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ವಿತರಿಸುತ್ತದೆ. ಹಾಗೆ ವಿಧವೆ, ವೃದ್ಧ ಹಾಗೂ ಅಂಗವಿಕಲರ ಸಹಾಯಕ್ಕೆ ನಿಂತು ಅವರಿಗಾಗಿ ಮಾಸಿಕ ಪಿಂಚಣಿಯನ್ನು ನೀಡುತ್ತದೆ. ಇದು ಅವರ ಆರ್ಥಿಕ ಸ್ಥಿತಿಗೆ ಒಂದಿಷ್ಟು ಬೆಂಬಲ ಅನ್ನುವುದು ಎಸೋಶಿಯೇಶನ್‌ನ ಮುಖ್ಯ ಆಶಯ. ಉಳಿದಂತೆ ಮಹಿಳೆಯರ ಹೊಲಿಗೆ ತರಬೇತಿಗೆ, ಬಡಮಕ್ಕಳ ವಿವಾಹಕ್ಕೆ, ಅನಾರೋಗ್ಯ ಪೀಡಿತ ರೋಗಿಗಳಿಗೆ, ಸುನ್ನತ್ ಕಾರ್ಯಕ್ಕೆ .... ಇತ್ಯಾದಿಗಳಿಗೆ ಅದು ಸದಾ ಸ್ಪಂದಿಸುತ್ತಲೇ ಇರುತ್ತದೆ. ಪ್ರತಿ ವರ್ಷವೂ ಆಗಮಿಸುವ ರಂಜಾನ್ ಹಬ್ಬವನ್ನು ಪ್ರತಿಯೋರ್ವ ಬಡವನೂ ಎಲ್ಲರಂತೆ ಆಚರಿಸಬೇಕೆಂಬ ದೃಷ್ಟಿಯಿಂದ ಅವರಿಗೆ ಝುಕಾತ್ ಮತ್ತು ಫಿತ್ರ್ ಮೊತ್ತವನ್ನು ನೀಡಲಾಗುತ್ತದೆ. ಇದು ಅವರ ಆರ್ಥಿಕ ಸ್ಥಿತಿಗೆ ಬಲ ನೀಡುವ ಜೊತೆಗೆ ಹಬ್ಬದ ಆನಂದವನ್ನೂ ಅನುಭವಿಸಲು ಸಹಾಯವಾಗುತ್ತದೆ. ಈ ಯೋಜನೆಯು ಪ್ರತಿವರ್ಷವೂ ಜಾರಿಯಲ್ಲಿದ್ದು ಕಳೆದ ವರ್ಷ (2007)ಇಲ್ಲಿ 1,57,214 ವಿತರಿಸಲಾಯಿತು.

ಮಹಿಳೆಯರು ಸ್ವಯದ್ಯೋಗದಲ್ಲಿ ತೊಡಗಬೇಕೆಂಬ ಆಶಯದಲ್ಲಿ ಅವರಿಗಾಗಿ ಉಚಿತ ಹೊಲಿಗೆ ತರಬೇತಿ ಕೇಂದ್ರವನ್ನು ಆರಂಭಿಸಲಾಗಿದೆ. ಇಲ್ಲಿ ಅವರಿಗಾಗಿ ನುರಿತ ಅಧ್ಯಾಪಕಿಯರು ಶಿಕ್ಷಣ ನೀಡುತ್ತಾರೆ. ಈಗಾಗಲೇ ಇಲ್ಲಿ ನೂರಾರು ವಿಧ್ಯಾರ್ಥಿನಿಯರು ಪ್ರಯೋಜನ ಪಡೆದಿದ್ದಾರೆ.

ರಂಜಾನ್ ಮಾಸದಲ್ಲಿ ಎಲ್ಲರನ್ನು ಪರಸ್ಪರ ಭೇಟಿಯಾಗಲು, ಸಂಸ್ಥೆಯ ಕುರಿತು ಚರ್ಚಿಸಲು ಒಂದು “ಇಫ್ತಾರ್ ಕೂಟ”ವನ್ನು ಏರ್ಪಡಿಸಲಾಗುವುದು ಉಡುಪಿಯ ‘ಜಾಮಿಯಾ’ ಮಸೀದಿಯಲ್ಲಿ ಜರಗುವ ಈ ಇಫ್ತಾರ್ ಸಂಜೆಗೆ ಸುಮಾರು 600ಕ್ಕೂ ಹೆಚ್ಚಿನ ಮಂದಿಗಳು ಜೊತೆಯಾಗುತ್ತಾರೆ. ಈ ಕಾರ್ಯಕ್ರಮವು ಕಳೆದ ಹಲವು ವರ್ಷಗಳಿಂದ ಜಾರಿಯಲ್ಲಿದ್ದು ಯಶಸ್ವಿಯಾಗಿ ಸಾಗುತ್ತಿದೆ.

ನಮ್ಮ ದೀನ ಧಾರ್ಮಿಕ ಶಿಕ್ಷಣವು ಕಡ್ಡಾಯವೆಂದು ಸಾರುತ್ತ ಬಂದಿರುವ ‘ಮುಸ್ಲಿಮ್ ವೆಲ್‌ಫೇರ್ ಎಸೋಸಿಯೇಶನ್’ ಎಲ್ಲಾ ಮಕ್ಕಳಿಗೂ ಈ ಶಿಕ್ಷಣ ಸಿಗುವಂತೆ ಪ್ರಯತ್ನಿಸುತ್ತಿದೆ. ಅದಕ್ಕಾಗಿ ಧಾರ್ಮಿಕ ಶಿಕ್ಷಣ ಸಂಸ್ಥೆ ಆರಂಭಿಸದಿದ್ದರೂ, ಈಗಾಗಲೇ ಕಾರ್ಯ ನಿರ್ವಹಿಸುತ್ತಿರುವ ಮದ್ರಸಾಗಳಿಗೆ ಮಾಸಿಕ ಧನ ಸಹಾಯ ನೀಡುತ್ತಿದೆ. ಅವುಗಳಲ್ಲಿ ಕೋಡಿ ಬೇಂಗ್ರೆ, ನಾಯರ್‌ಕೆ, ಕಲ್ಮಾಡಿ, ಹಂಗಾರ್ ಕಟ್ಟೆ, ತೋನ್ಸೆ, ಹಾಗೂ ಪೆರ್ಡೂರು ಮುಖ್ಯವಾದವು.

ಒಂದು ಸಂಘ ಸಂಸ್ಥೆಯು ಯಶಸ್ವಿಯಾಗಬೇಕಾದರೆ ಅದಕ್ಕೆ ಶ್ರಮದ ಜೊತೆಗೆ ಆರ್ಥಿಕ ಬಲವೂ ಅಗತ್ಯ. ಸಂಸ್ಥೆಯು ಆದಾಯ ಮೂಲಕ್ಕೆ ರಂಜಾನ್ ಮಾಸದಲ್ಲಿ ದೊರೆಯುವ ಝುಕಾತ್, ಫತ್ರ್ ಸಂಗ್ರಹಿಸುತ್ತದೆ, ಹಾಗೇ ಹಬ್ಬದಂದು ಬಲಿದಾನ ಮಾಡಿದ ಪ್ರಾಣಿಗಳ ಚರ್ಮವನ್ನು ಸಂಗ್ರಹಿಸುತ್ತದೆ. ಹಾಗೇ ಉದಾರ ಮನಸ್ಸಿನಿಂದ ನೀಡಿದ ಧನ ಸಹಾಯವನ್ನು ಸ್ವೀಕರಿಸುತ್ತದೆ, ಜೊತೆಗೆ ಸ್ವಂತ ಕಟ್ಟಡದ ಬಾಡಿಗೆ ಹಣವನ್ನು ಇದಕ್ಕಾಗಿ ಉಪಯೋಗಿಸುತ್ತಾರೆ.

ಅಂತೂ 25 ವರ್ಷಗಳ ರಜತ ಸಾಲುಗಳನ್ನು ದಾಟಿಕೊಂಡಿರುವ “ಮುಸ್ಲಿಮ್ ವೆಲ್‌ಫೇರ್” ಇನ್ನಷ್ಟು ಪ್ರಗತಿಯಲ್ಲಿ ಸಾಗಬೇಕೆಂಬ ಛಲದಲ್ಲಿದೆ. ಆದರೆ ಅದಕ್ಕೆ ಆರ್ಥಿಕ ಆಧಾರದ ಜೊತೆಗೆ ಉತ್ತಮ ಸಂಬಂಧ ಮತ್ತು ಸಾಮರಸ್ಯದ ಜೊತೆಗೆ ಎಲ್ಲರ ಸಹಕಾರವು ಬೇಕಾಗಿದೆ ಈ ಸಹಾಯವು ನಮ್ಮ ನಮ್ಮಿಂದಲೇ ಆಗಬೇಕು.

ಸಮುದಾಯದ, ಸಮಾಜದ ಮತ್ತು ಬಡವರ್ಗದ ಹಿತಕ್ಕಾಗಿ ಮಾಡುವ ಈ ಕಾರ್ಯದಲ್ಲಿ ಎಲ್ಲೂ ಸ್ವಾರ್ಥ ಅಡಗಿಲ್ಲ ಅದು ಇನ್ನೊಂದು ಕೋಮಿಗೂ ತೊಂದರೆ ಯಾಗಲಿ, ನೋವಾಗಲಿ ನೀಡಿಲ್ಲ. ಎಲ್ಲರ ಜೊತೆಗೆ ಉತ್ತಮ ಸಂಬಂಧ ಮತ್ತು ಸಾಮರಸ್ಯದ ಜೊತೆಗೆ ಸಾಗುವ ವೆಲ್‌ಫೇರ್ ಸದಾ ಶಾಂತಿ ಮತ್ತು ರಾಷ್ಟ್ರದ ಹಿತವನ್ನೇ ಬಯಸುತ್ತದೆ.
ಕರುಣಾಮಯಿ ಅಲ್ಲಾಹನು ಈ ಸೇವೆಯನ್ನು ಸ್ವೀಕರಿಸಲಿ, ಇನ್ನಷ್ಟು ಅನುಗ್ರಹ ನೀಡಲಿ ಹಾಗೂ ನಾಳೆಯ ನಿರ್ಣಯ ದಿನಕ್ಕೆ ಪ್ರತಿಫಲ ನೀಡಲಿಯೆಂದು ನಮ್ಮೆಲ್ಲರ ಹಾರೈಕೆ.... ಆಮೀನ್

ಇರ್ಷಾದ್ ಮೂಡಬಿದ್ರಿ
ದುಬ್ಯಾ